ಇ) ಹಾಗಿದ್ದಲ್ಲಿ, ಇಂತಹ ಕ್ರಮದಿಂದ ಸೇವೆಯಲ್ಲಿ ಕಿರಿಯದಾದವರ ಕೈಕೆಳಗೆ ಹೆಚ್ಚು ಅವಧಿ ಸೇವೆ ಸಲ್ಲಿಸಿದವರು ಕೆಲಸ ಮಾಡುವ ವಾತಾವರಣ ನಿರ್ಮಿಸಲಾದಂತಾಗುವುದಿಲ್ಲವೇ?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :—

ಅ) 25 ನೌಕರರ ಪೈಕಿ 23 ನೌಕರರನ್ನು ಕೆಳಕಂಡ ವೇತನ ಶ್ರೇಣಿಯನ್ನು ಕೆಳಕಂಡ ದಿನಾಂಕಗಳಂದು ಖಾಯಂಗೊಳಿಸಲಾಗಿದೆ.

		ವೇತನ ಶ್ರೇಣಿ	ಖಾಯಂಗೊಳಿಸಿದ ದಿನಾಂಕ
1)	ಸಹಾಯಕ ಇಂಜಿನಿಯರ್	6000-11200	31-7-99
2)	ಕಿರಿಯ ಇಂಜಿನಿಯರ್	6000-11200	04-08-99
3)	ದ್ವೀ.ದ.ಸ.	3000-5450	19-11-99
4)	ಗ್ರೂಪ್ - ಡಿ	2500-3850	19-11-99

ಆ) ಕರ್ನಾಟಕ ಗೃಹ ಮಂಡಳಿಯು ಕಾರ್ಯ ವೈಖರಿಯನ್ನು ಬದಲಿಸಿರುವ ಹಿನ್ನೆಲೆಯಲ್ಲಿ ನೌಕರರ ಜೇಷ್ಠತಾ ಪಟ್ಟಿ ಹಾಗೂ ಅರ್ಹತನೆಯನ್ನು ಪರಿಗಣಿಸಿ ಬಡ್ತಿಯನ್ನು ನೀಡಲಾಗಿದೆ. ಅಂದರೆ ಉಪ ವ್ಯವಸ್ಥಾಪಕ ಹುದ್ದೆಯಿಂದ ವ್ಯವಸ್ಥಾಪಕ ಹುದ್ದೆಗೆ ಬಡ್ತಿ ನೀಡಿದೆ.

ಇ) ಜೇಷ್ಠತಾ ಪಟ್ಟಿ ಹಾಗೂ ಅರ್ಹತೆಯನ್ನು ಪರಿಗಣಿಸಿ ಬಡ್ತಿಯನ್ನು ನೀಡಿರುವ ಕಾರಣ ಇಂತಹ ವಾತಾವರಣ ನಿರ್ಮಾಣವಾಗಿರುವುದಿಲ್ಲ.

ದಿನಗೂಲಿ ನೌಕರರನ್ನು ಖಾಯಂ ಮಾಡುವುದು.

4226(4299) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕಂದಾಯ ಇಲಾಖೆಯಲ್ಲಿ 01-07-84ರ ನಂತರ ನೇಮಕ ಹೊಂದಿ ಪ್ರಸ್ತಕ ಸೇವೆ ಸಲ್ಲಿಸುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು?

2. 01-07-84ರ ಮೊದಲು ನೇಮಕವಾದ ದಿನಗೂಲಿ ನೌಕರರ ಸೇವೆಯನ್ನು ಮಾತ್ರ ಸಕ್ರಮಗೊಳಿಸಿ 01.07.84ರ ನಂತರ ನೇಮಕಗೊಂಡ ದಿನಗೂಲಿ ನೌಕರರ ಸೇವೆಯನ್ನು ಖಾಯಂಗೊಳಿಸದೇ ಇರಲು ಕಾರಣವೇನು?

3. 01.07.84ರ ನಂತರ ಸೇವೆಗೆ ಸೇರಿದ ದಿನಗೂಲಿ ನೌಕರರನ್ನು ಎಂದು ಖಾಯಂಗೊಳಿಸಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :—

1. ಒಟ್ಟು 30

2. ಈ ಪ್ರಕರಣವು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

3. ಸದ್ಯಕ್ಕೆ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ.

4227(4560) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ನಿಗಮಗಳ ವಿವಿಧ ವಿಭಾಗಗಳಲ್ಲಿ 1999-2000 ಮತ್ತು 2000-2001 ನೇ ಸಾಲಿನಲ್ಲಿನ ಆದಾಯ ಮತ್ತು ನಷ್ಟದ ಪ್ರಮಾಣ ಎಷ್ಟು ;

ಆ) ರಾಜ್ಯದಾದ್ಯಂತ ಖಾಸಗಿ ಬಸ್ ಸಂಸ್ಥೆಗಳಿಂದ ತೀವ್ರ ಪೈಪೋಟಿಯನ್ನು ಎದುರಿಸುತ್ತಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅಭಿವೃದ್ಧಿಗೆ ಸರಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :—

ಅ) 1999-2000 ಮತ್ತು 2000-2001(ಆಗಸ್ಟ್ ವರೆಗೆ) ಬಂದಿರುವ ವಿಭಾಗವಾರು ಆದಾಯ ಹಾಗೂ ಹೊಂದುವ ನಷ್ಟದ ವಿವರಗಳನ್ನು ಅನುಬಂಧ-ಎ ನಲ್ಲಿ ಲಗತ್ತಿಸಲಾಗಿದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಖಾಸಗಿ ಪ್ರವರ್ತಕರ ಪೈಪೋಟಿಯನ್ನು ಎದುರಿಸಲು ತನ್ನ ಕಾರ್ಯಾಚರಣೆಯನ್ನು ಉತ್ತಮಪಡಿಸಲು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಅವುಗಳಲ್ಲಿ ಮುಖ್ಯವಾದವು ಕೆಳಕಂಡಂತಿದೆ.

1) ಆಧುನಿಕ ಪಿ-5000 ಶ್ರೇಣಿಯ ಅಲ್ಟ್ರಾ ಡಿಲಕ್ಸ್ ಪ್ಲಸ್ ಬಸ್ಸುಗಳ ಅಳವಡಿಕೆ

2) ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ 20-40 ಕಿ.ಮೀ.ಗಳವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಎರಡು ಬಾಗಿಲುಗಳ ಬಸ್ಸುಗಳ ಕಾರ್ಯಾಚರಣೆ

3) ಮುಂಗಡ ಕಾಯ್ದಿರಿಸುವಿಕೆ ಟಿಕೇಟುಗಳನ್ನು ಹೊಂದಿದವರಿಗೆ ಅವರ ಮನೆಯಿಂದ ಬಸ್ಸು ನಿಲ್ದಾಣಗಳಿಗೆ ನಗರ ಸಾರಿಗೆಗಳಲ್ಲಿ ಉಚಿತವಾಗಿ ಪ್ರಯಾಣಿಸುವ ಸೌಲಭ್ಯ.